ಇಂದು ದಿನಾಂಕಃ 11.11.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಪಿ.ವಿ.ಕೆ. ವಕೀಲರಿಂದಃ

1. ನಾನು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನನ್ನ ಮಾಹಿತಿಯ ಮೇರೆಗೆ ವಕೀಲರು ಸಲ್ಲಿಸಿರುತ್ತಾರೆ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಕೆರೆ ಏರಿಯ ಮೇಲೆ ಒಡ್ಡು ಇದೆ ಎಂದು ಬರೆಸಿರುತ್ತೇನೆ ಮತ್ತು ಸದರಿ ಒಡ್ಡಿನ ಮೇಲೆ ಸಾರ್ವಜನಿಕರು ಪ್ರತಿನಿತ್ಯ ಓಡಾಡುತ್ತಾರೆ ಎಂದು ಬರೆಸಿರುತ್ತೇನೆ. ವಾದಿಯರು ಕೆರೆ ಏರಿಯ ಮೇಲೆ ಇರುವ ಒಡ್ಡನ್ನು ಕಡಿದು ನನಗೆ ಮತ್ತು ಸಾರ್ವಜನಿಕರಿಗೆ ಓಡಾಡದಂತೆ ತೊಂದರೆ ನೀಡುತ್ತಿದ್ದಾರೆ. ವಾದಿಯರು ಸದರಿ ತೊಂದರೆಯನ್ನು ಸುಮಾರು ಒಂದುವರೆ ಅಥವಾ 2 ವರ್ಷಗಳ ಹಿಂದಿನಿಂದ ಮಾಡಿರುತ್ತಾರೆ.

2. ವಾದಿಯರು ನಮಗೆ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಓಡಾಡಲು ತೊಂದರೆ ಕೊಟ್ಟಿದ್ದಾರೆ ಎಂದು ಪ್ರತಿಮಾಗಣೆಯನ್ನಾಗಲೀ ಅಥವಾ ಪ್ರತ್ಯೇಕ ದಾವೆಯನ್ನು ಸಲ್ಲಿಸಿರುವುದಿಲ್ಲ. ನನ್ನ ಆಸ್ತಿಯ ಸರ್ವೇ ನಂಬರ್ 128. ನನ್ನ ತಮ್ಮನ ಹೆಸರು ಚಂದ್ರಗೌಡ. ಆತ ಇನ್ನು ಜೀವಿತವಿದ್ದಾನೆ. ಅಸಲು ದಾವಾ ಸಂಖ್ಯೆಃ 139/1998 ರಲ್ಲಿ ಸದರಿ ಚಂದ್ರಗೌಡ ನನ್ನ ಮೇಲೆ ಮತ್ತು ನನ್ನ ಇನ್ನೊಬ್ಬ ಸಹೋದರನಾದ ರುದ್ರಗೌಡನ ಮೇಲೆ ದಾವೆಯನ್ನು ಸಲ್ಲಿಸಿದ್ದನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರುದ್ರಗೌಡನೇ ದಾವೆಯನ್ನು ಸಲ್ಲಿಸಿದ್ದನು ಎಂದು ನುಡಿಯುತ್ತಾರೆ. ಸದರಿ ದಾವೆಯು ರಾಜಿಯ ಮೂಲಕ ಮುಕ್ತಾಗೊಂಡಿರುತ್ತದೆ ಎಂದರೆ ಸರಿಯಲ್ಲ. ರುದ್ರಗೌಡನಿಗೆ ಸರ್ವೇ ನಂಬರ್ 128 ರ ಆಸ್ತಿಯಲ್ಲಿ ಅವನಿಗೆ ಬಂದಂತಹ ಹಿಸ್ಸೆ ಇರುತ್ತದೆ. ಸರ್ವೇ ನಂಬರ್ 128 ರ ಜಮೀನಿಗೆ ಸರ್ವೇ ನಂಬರ್ 129 ರ ಜಮೀನಿನ ಪೂರ್ವ ಭಾಗದಿಂದ ಹೋಗಲು ದಾರಿಯ ಹಕ್ಕು ಇದೆ ಎಂದು ಸದರಿ ದಾವೆಯಲ್ಲಿ ತೀರ್ಮಾನವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 129 ರ ಜಮೀನು ನೀರಾವರಿ ಜಮೀನು ಇರುವುದರಿಂದ ಅಲ್ಲಿ ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

3. ಶ್ರೀರಾಮಕೊಪ್ಪದ ಕೆರೆಯ ಏರಿಯು ಸುಮಾರು ಮುಕ್ಕಾಲು ಕಿ.ಮೀ. ಇರುತ್ತದೆ. ಜಮೀನುಗಳ ನೆಲಮಟ್ಟದಿಂದ ಶ್ರೀರಾಮಕೊಪ್ಪದ ಏರಿಯು ಸುಮಾರು 10-12 ಅಡಿಯ ಮೇಲೆ ಇರುತ್ತದೆ. ಸದರಿ ಏರಿಯನ್ನು ಕಾಮಗಾರಿಯ ಮುಖಾಂತರ ರಿಪೇರಿ ಮಾಡಿಸಿರುತ್ತಾರೆ.

ಸದರಿ ಕೆರೆಯ ಏರಿಗೆ ಹೊಂದಿಕೊಂಡಂತೆ 1 ರಿಂದ 3 ನೇ ವಾದಿಯರ ಜಮೀನು ಇರುತ್ತದೆ. ಸದರಿ ಏರಿಯ ಮೇಲೆ ಯಾವುದೇ ಗಿಡ ಗಂಟೆಗಳು ಬೆಳೆದಿರುವುದಿಲ್ಲ. ವಾದಿಯರ ಮತ್ತು ನನಗೆ ಸೇರಿದ ಜಮೀನು ಹೊಂದಿಕೊಂಡಂತೆ ಇರುತ್ತದೆ. ನನ್ನ ಜಮೀನಿನ ಪಕ್ಕಕ್ಕೆ ಹೊಂದಿಕೊಂಡಂತೆ ಕೆರೆ ಏರಿಯು ಇರುತ್ತದೆ. ನನಗೆ ಕೆರೆಯ ಏರಿಯ ಮೇಲೆ ಓಡಾಡಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಹಸ್ತ ನಕ್ಷೆಯ ಡಿ.ಎಲ್.ಕೆ. ಭಾಗದಲ್ಲಿ ಓಡಾಡಲು, ಚಕ್ಕಡಿಯನ್ನು ತೆಗೆದುಕೊಂಡು ಹೋಗಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಚಕ್ಕಡಿ ಗಾಡಿಯನ್ನು ತೆಗೆದುಕೊಂಡು ಹೋಗುವ ಪರಿಸ್ಥಿತಿಯಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಕೆರೆಯ ಏರಿಯು ಸಮತಟ್ಟಾಗಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಕಾರಣಕ್ಕೂ ಚಕ್ಕಡಿ ಗಾಡಿಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನಗೆ ಸೇರಿದ ಆಸ್ತಿಗೆ ಹೋಗಲು ಪ್ರತ್ಯೇಕ ದಾರಿ ಇದೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ತೊಂದರೆಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರ ಆಸ್ತಿಯಲ್ಲಿ ಹಾಕಿರುವ ತಂತಿ ಬೇಲಿಯನ್ನು ಕಿತ್ತು ಹಾಕಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.